# ಡಾ.ಬರಗೂರರ ರಾಮಚಂದ್ರಪ್ಪರ 'ಶಾಂತಿ' ಸಿನೆಮಾ : ಸ್ತ್ರೀವಾದಿ ಒಳನೋಟ

**ಡಾ.ಮುಮ್ತಾಜ್‌ಬೇಗಂ ಗಂಗಾವತಿ**

ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ

ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗಂಗಾವತಿ.

ಜಿಲ್ಲಾ ಕೊಪ್ಪಳ. ಮೋ:೯೯೮೬೬೬೬೦೭೫

**ಕ**ನ್ನಡ ಸಾಹಿತ್ಯದ ಪ್ರಮುಖ ಬರಹಗಾರರಲ್ಲಿ ಒಬ್ಬರಾದ ನಾಡೋಜ ಡಾ.ಬರಗೂರು ರಾಮಚಂದ್ರಪ್ಪನವರು ಸಾಹಿತ್ಯ, ಸಿನೆಮಾ, ಸಂಸ್ಕೃತಿ, ಚಳುವಳಿ, ಸಂಘಟನೆ ಹೀಗೆ ಅನೇಕ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಚಿಂತನೆಗೆ ಹೆಸರಾದವರು. ನೇರ ನಿಷ್ಠುರ ಮಾತುಗಳಿಂದ ರಾಜಿ ಮಾಡಿಕೊಳ್ಳದ, ಅಪಾರ ಮಾನವೀಯತೆಯ ಒರತೆಯಾಗಿರುವ, ನುಡಿಯನ್ನು ನಡೆಯಲ್ಲಿ ಅನುಸರಿಸಿದ ಅಪರೂಪ ವ್ಯಕ್ತಿತ್ವದ ಬರಗೂರರು ಕನ್ನಡ ನಾಡಿನ ಸಾಕ್ಷಿ ಪ್ರಜ್ಞೆಯಾಗಿದ್ದಾರೆ. ಇವರು ಸಾಹಿತ್ಯದಷ್ಟೇ ಸಿನಿಮಾವನ್ನು ಪ್ರೀತಿಸಿದವರು. ಆರಂಭದ ಹಲವು ಚಿಕ್ಕಟ್ಟುಗಳನ್ನು ಎದುರಿಸುತ್ತಲ್ಲೇ ಸೋತ ಜಾಗದಲ್ಲೇ ಮತ್ತೆ ಗೆದ್ದ ಛಲಗಾರ, ವಿಶಿಷ್ಟ ಪರಿಭಾಷೆಗಳ ಮಾತುಗಾರ. ಕನ್ನಡ ಸಾಹಿತ್ಯಕ್ಕೆ ಕಥೆ, ಕಾದಂಬರಿ, ವೈಚಾರಿಕ ಲೇಖನಗಳು, ಅಂಕಣ ಬರಹಗಳು, ಸಂಸ್ಕೃತಿ ಚಿಂತನೆಯ ಕೃತಿಗಳನ್ನು ಪ್ರಕಟಿಸುವ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಮುಖರಾಗಿದ್ದಾರೆ. ಇವರ ನಿರ್ದೇಶನದಲ್ಲಿ ೨೧ ಚಲನಚಿತ್ರಗಳು ಮೂಡಿ ಬಂದಿವೆ. ಬರಗೂರರು ನಿರ್ದೇಶಿಸಿದ '**ಶಾಂತಿ**' ಸಿನೆಮಾ ಹಲವು ಕಾರಣಗಳಿಗೆ ಬಹಳ ಮುಖ್ಯವೆನಿಸುವ ಸಿನೆಮಾ.

ಹೊಸ ಹೊಸ ಪ್ರಯೋಗಗಳನ್ನು ಹುಟ್ಟು ಹಾಕುವ ಮೂಲಕ ಸಿನಿಮಾ ಮಾಧ್ಯಮಗಳ ಸಾಧ್ಯತೆಗಳನ್ನು ಹೇಳುವ ಪ್ರಯತ್ನವನ್ನು ಬರಗೂರರ ಸಿನೆಮಾಗಳಲ್ಲಿ ಕಾಣುತ್ತೇವೆ. ಸಾಮಾಜಿಕ ಕಳಕಳಿ ಮತ್ತು ಸಾಮಾಜಿಕ ಜವಾಬ್ದಾರಿ ಇವರು ಕೃತಿ ಮತ್ತು ಸಿನೆಮಾಗಳ ಮುಖ್ಯ ಆಶಯಗಳಾಗಿವೆ. ಈ ಕೇಂದ್ರ ಪ್ರಜ್ಞೆಯಲ್ಲೆ ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ಅವರು ಸಿನೆಮಾಗಳಲ್ಲಿ ಹೊಸ ಹೊಸ ಸಾಧ್ಯತೆಗಳನ್ನು ಹುಡುಕುತ್ತಿರುವ ಕನಸುಗಾರ.

ಪ್ರಸಿದ್ಧ ಸಿನಿಮಾ ಮೀಮಾಂಸಕ ಆಂದ್ರೆ ಬಾಜಿನ್ ಅವರ' ಮಾತು ಈ ಸಂದರ್ಭಕ್ಕೆ ಮುಖ್ಯವೆನಿಸುತ್ತದೆ. " ಸಿನಿಮಾ ಎಂಬ ಕಲಾ ಮಾಧ್ಯಮಕ್ಕೆ ಸಾಹಿತ್ಯ ಮತ್ತು ರಂಗಭೂಮಿ ಎರಡು ಊರುಗೋಲುಗಳು" ಎಂದು ಹೇಳುತ್ತಾರೆ. ಸಿನಿಮಾ ಚಾರಿತ್ರಿಕ ಪರಂಪರೆಯಲ್ಲಿ ಸಾಹಿತ್ಯ, ರಂಗಭೂಮಿ, ಮತ್ತು ಸಿನೆಮಾ ಒಂದಕ್ಕೊಂದು ಪೂರಕವಾಗಿ ಕೆಲಸಮಾಡುತ್ತಿರುತ್ತವೆ. ಆದ್ದರಿಂದ ಆರಂಭದ ಕಾಲಲ್ಲಿ ಸಿನೆಮಾಗಳು ತಂತ್ರಜ್ಞಾನದ ದೃಷ್ಟಿಯಿಂದ ಅದ್ಭುತಗಳೆಂಬಂತೆ ಕಾಣಲಾಗುತ್ತಿತ್ತು. ಆರಂಭದ ಕಾಲ ಸಂದರ್ಭದಲ್ಲಿ ಮನರಂಜನೆ ವಸ್ತುವಿನ ಜೊತೆ ಕಥಾನಕ ರೂಪದಲ್ಲಿ ಹೆಣೆಯುವ ಪ್ರಯತ್ನಗಳು ನಡೆದವು. ನಂತರದಲ್ಲಿ ಸಾಹಿತ್ಯದ ವಸ್ತುಕಥನ ಮತ್ತು ರಂಗಭೂಮಿಯ ನಿರೂಪಣೆಯ ತಂತ್ರಗಳನ್ನು ನಿರ್ದೇಶಕರು ಅಳವಡಿಸಿಕೊಳ್ಳಲಾರಂಭಿಸಿದರು. ಸಿನಿಮಾ ತಾಂತ್ರಿಕತೆಗಷ್ಟೇ ಸೀಮಿತವಾಗದೇ ಜಗತ್ತಿನ ಬಹುತೇಕ ಕ್ರಿಯಾತ್ಮಕ ನಿರ್ದೇಶಕರನ್ನು ಸಾಹಿತ್ಯ ಕೃತಿಗಳು ಸೆಳೆದಿವೆ. ಯೂರೋಪಿನಲ್ಲಿ ಅನೇಕ ಅಭಿಜಾತ ಕೃತಿಗಳು ಸಿನಿಮಾಗಳಾಗಿ ಹೊರಹೊಮ್ಮಿರುವುದನ್ನು ಕಾಣುತ್ತೇವೆ. ಭಾರತೀಯ ಚಿತ್ರರಂಗದಲ್ಲಿ ಮೂಕಿ ಚಿತ್ರ ಯುಗ ಆರಂಭವಾಯಿತು.

ಕನ್ನಡದ ಸಂದರ್ಭಕ್ಕೆ ಕೃಷ್ಣಮೂರ್ತಿ ಪೂರಾಣಿಕರ 'ಧರ್ಮದೇವತೆ' ಕಾದಂಬರಿ ಆಧರಿಸಿದ ಕರುಣೆಯೇ ಕುಟುಂಬದ ಕಣ್ಣು ಕಾದಂಬರಿ ಆಧಾರಿತ ಸಿನಿಮಾವಾದರೆ, ಸಾಹಿತ್ಯ ಕೃತಿ ಆಧಾರಿತ ಮೊದಲ ಕನ್ನಡ ಚಿತ್ರ 'ಸಂಸಾರ ನೌಕೆ'. ಮುಂದೆ ಅನೇಕ ನಿರ್ದೇಶಕರು ಈ ಪರಂಪರೆಯನ್ನು ಮುಂದುವರೆಸಿ ಅದೇಷ್ಟೋ ಸಾಹಿತ್ಯ ಕೃತಿಗಳನ್ನು ಸಿನಿಮಾವಾಗಿಸುವ ಮೂಲಕ ಸಿನೆಮಾ ಮತ್ತು ಸಾಹಿತ್ಯದ ಅಂತರ್‌ಸಂಬಂಧವನ್ನು ಗಟ್ಟಿಗೊಳಿಸಿದರು.

ಈ ನೆಲೆಯಲ್ಲಿ ಭಿನ್ನ ದೃಷ್ಟಿಕೋನದಿಂದ ವಿವೇಚಿಸಲು, ವ್ಯಾಖ್ಯಾನಿಸಲು, ನಿರೂಪಿಸಲು ಹೊರಟವರು ಬರಗೂರು ರಾಮಚಂದ್ರಪ್ಪನವರು. ಸಾಹಿತ್ಯ ಕೃತಿಯೊಟ್ಟಿಗೆ ನಡೆಸಿದ ಅನುಸಂಧಾನ, ನಿರೂಪಣೆ, ದೃಶ್ಯ ಸಂಯೋಜನೆ, ಶಬ್ದ, ಬೆಳಕು, ನಿಸರ್ಗವನ್ನು ಬಳಸಿಕೊಂಡಿರುವ ರೀತಿ, ಚಿತ್ರವೊಂದು ನಿರ್ದೇಶಕನ ಮಾಧ್ಯಮವೆಂಬುದನ್ನು ಸಾಬೀತುಪಡಿಸಿದರು. ಸಿನಿಮಾ ವ್ಯಾಕರಣವನ್ನು ವೈವಿಧ್ಯಮಯವಾಗಿ ಕಟ್ಟುವ ಪ್ರಯತ್ನವನ್ನು ಇವರ ಸಿನಿಮಾಗಳಲ್ಲಿ ಕಾಣುತ್ತೇವೆ.

ನಾಟಕ ಕೃತಿ ಹೇಗೆ ರಂಗ ಕೃತಿಯಾಗುತ್ತದೋ ಹಾಗೆ ಸಾಹಿತ್ಯದ ಕೃತಿ ಸಿನೆಮಾ ಕೃತಿಯಾಗಬೇಕಾದರೆ ಪುನರ್ ಸೃಷ್ಟಿಯಾಗಬೇಕು ನೋಡುವ ಚೌಕಟ್ಟು ಬದಲಾದರೂ ಆಶಯಗಳು ಬದಲಾಗಲಾರವು ಎಂದು ನಂಬಿದವರು. ತಮ್ಮನ್ನು ತಾವು ಮೀರುವುದೇ ಪ್ರಯೋಗಶೀಲತೆ ಎಂದುಕೊಂಡವರು.

ಸೃಜನಶೀಲ ಬರಹಗಾರರಾದ ನಾಡೋಜ ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದಲ್ಲಿ ಮೂಡಿ ಬಂದ ವಿಶಿಷ್ಟ ಚಲನಚಿತ್ರ ಶಾಂತಿ. ಕಲಾಕಾರ ಗೌರವ, ಮನ್ನಣೆ, ಪ್ರಶಸ್ತಿಯನ್ನು ಬಯಸಿದರೆ ಜನ ಕಲಾಕಾರನಿಂದ ಜವಾಬ್ದಾರಿಯನ್ನು ಬಯಸುತ್ತಾರೆ ಎನ್ನುವ ಮಾತಿನಂತೆ ಬರಗೂರರು ಸೃಜನಾತ್ಮಕ ಜವಾಬ್ದಾರಿಯ ಉತ್ತರದಾಯಿತ್ವವನ್ನು ಬಹು ಸೊಗಸಾಗಿ ನಿರ್ವಹಿಸಿದವರು. ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಸಾಹಿತ್ಯ ಮತ್ತು ಸಿನೆಮಾ ಎರಡು ಕ್ಷೇತ್ರದಲ್ಲಿ ಹೆಜ್ಜೆಗುರುತುಗಳನ್ನು ಮೂಡಿಸಿದವರು.

ಶಾಂತಿ ಗಿನ್ನಿಸ್ ದಾಖಲೆಯನ್ನು ಬರೆದ ಚಲನಚಿತ್ರ. ಶಾಂತಿ ಚಿತ್ರದಲ್ಲಿ ಇಡಿ ಸಿನೆಮಾದುದ್ದಕ್ಕೂ ಒಂದೇ ಪಾತ್ರವನ್ನು ಇಟ್ಟುಕೊಂಡು ಭಾರತೀಯ ಹಲವು ಚಿಂತನಾಧಾರೆಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸಿದ ರೀತಿ ನಿಜಕ್ಕೂ ಮೆಚ್ಚುವಂತಹುದು.

ಶಾಂತಿ ನಾಯಕಿ ಪ್ರಧಾನವಾಗಿಟ್ಟುಕೊಂಡು ಮಾಡಲಾಗಿರುವ ಸಿನೆಮಾದಲ್ಲಿ ಪ್ರಸಿದ್ಧ ಚಿತ್ರಕಾರ್ತಿಯೊಬ್ಬಳನ್ನು ವಿಶ್ವಶಾಂತಿ ಸಮ್ಮೇಳನಕ್ಕಾಗಿ ಚಿತ್ರಗಳನ್ನು ರಚಿಸಿಕೊಡಲು ಕೇಳಲಾಗಿರುತ್ತದೆ. ನಿಸರ್ಗದ ಮಡಿಲಿನಲ್ಲಿರುವ ಪ್ರಶಾಂತ ಸ್ಥಳಕ್ಕೆ ಚಿತ್ರ ರಚಿಸಲು ನಾಯಕಿ ಫಾರ್ಮ ಹೌಸ್‌ಗೆ ಬರುತ್ತಾಳೆ. ಅಲ್ಲಿ ಆಕೆಯ ಕೆಲಸಗಳಿಗೆ ಭಯೋತ್ಪಾದಕ ಗುಂಪು ಆಕೆಯ ಮನಸ್ಸಿನ ಅಶಾಂತಿಯನ್ನು ಹುಟ್ಟು ಹಾಕುವ ಮೂಲಕ ಬೆದರಿಕೆ, ಅಪರಹರಣದಿಂದ ತಮ್ಮನ್ನೂ ವಿಶ್ವಶಾಂತಿ ಸಮ್ಮೇಳನಕ್ಕೆ ಕರೆದೊಯ್ಯುವಂತೆ ಒತ್ತಡ ಹಾಕುತ್ತಾರೆ. ಅದೆಲ್ಲದರಿಂದ ಬಿಡಿಸಿಕೊಂಡು ನಾಯಕಿ ಸಮ್ಮೇಳನದಲ್ಲಿ ಭಾಗಿಯಾಗುವಲ್ಲಿಗೆ ಸಿನಿಮಾ ಕಥೆ ಮುಗಿಯುತ್ತದೆ; ಇದು ಶಾಂತಿ ಸಿನೆಮಾದ ಸ್ಥೂಲ ಚಿತ್ರಣ. ಚಿತ್ರ ರಚಿಸುವ ಸಂದರ್ಭದಲ್ಲಿ ನಡೆಯುವ ಘಟನಾವಳಿಗಳನ್ನು ಇಟ್ಟುಕೊಂಡು ಮನುಷ್ಯ ಸ್ವಭಾವವನ್ನು ತುಂಬಾ ಸೂಕ್ಷ್ಮವಾಗಿ ಬಣ್ಣಗಳ ಸಂಕೇತಗಳ ಮೂಲಕ ಸೆರೆಹಿಡಿದಿದ್ದಾರೆ.

ಮನುಷ್ಯ ಮನುಷ್ಯರ ಮಧ್ಯೆ ಶಾಂತಿ ಸ್ಥಾಪನೆಯಾದರೆ ಜಗತ್ತಿನಲ್ಲಿ ಶಾಂತಿ ತಂತಾನೆ ಸ್ಥಾಪಿತವಾಗುತ್ತದೆಂಬ ವಿಶ್ವಪರಿಕಲ್ಪನಾತ್ಮಕ ಆಶಯದ ಹಿನ್ನಲೆಯಲ್ಲಿ ಸಿನೆಮಾ ಪ್ರಾರಂಭವಾಗುವುದು. ಜಾಗತೀಕರಣದ ಛಾಯೆ ಜಗತ್ತಿನಾದ್ಯಂತ ಪಸರಿಸುರಿಸುತ್ತಿರುವ ಸಂದರ್ಭದಲ್ಲಿ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಜಾಗರತೀಕರಣದ ಚರ್ಚೆಗಳು ನಡೆದಿರುವುದನ್ನು ಕಾಣುತ್ತೇವೆ. ಸಂಸ್ಕತಿ, ಪರಂಪರೆ, ಜಾಗತೀಕರಣ ಬಹು ಚರ್ಚೆಗೊಳಗಾದ ಪರಿಭಾಷೆಗಳು ಮತ್ತು ವಸ್ತು ವಿಷಯವೂ ಹೌದು. ಹಾಗೆ ಸೃಜನೇತರ ಪ್ರಕಾರಗಳಲ್ಲಿ ಜಾಗತೀಕರಣದ ಪರಿಣಾಮವಾದ ಯುದ್ಧ ಮತ್ತು ಶಾಂತಿಯನ್ನು ಕುರಿತಂತೆ ವಸ್ತುವನ್ನು ಇಟ್ಟುಕೊಂಡು ಕನ್ನಡದ ಸಂದರ್ಭದಲ್ಲಿ ಅನೇಕ ಸಿನಿಮಾಗಳು ಬಂದವು. ಅವುಗಳಲ್ಲಿ ಭಿನ್ನವಾಗಿ ನಿಲ್ಲುವ ಸಿನಿಮಾವೇ "ಶಾಂತಿ".

ನಿಸರ್ಗದ ಮಡಿಲಲ್ಲಿ ನಾಯಕಿ ಬಿಡಿಸುವಂತಹ ಚಿತ್ರಗಳಲ್ಲೇ ಅಗಾಧವಾದ ಅರ್ಥವಂತಿಕೆ ತುಂಬುವ ಮೂಲಕ, ಶಾಂತಿ ಪ್ರತಿಪಾದನೆಯನ್ನು ಮಾಡುತ್ತಾ ಹೋಗುವ ಬರಗೂರರು, ಅಲ್ಲಿ ಹುಟ್ಟು ಹಾಕುವ ಪ್ರಶ್ನೆಗಳು ಆ ಪ್ರಶ್ನೆಗಳಿಗೆ ನಾಯಕಿ ಕಂಡುಕೊಳ್ಳುವ ಉತ್ತರಗಳು ತುಂಬಾ ಮಾರ್ಮಿಕವಾಗಿವೆ. 'ಸಿದ್ಧ ಅರ್ಥಗಳ ಮೀರಿದ ಬುದ್ಧ, ನಿದ್ದೆ ಹಾದಿಯಲಿ ಹಗಲನು ಗೆದ್ದ' ಆದರೆ ಅಂತ ಬುದ್ಧನ ನಾಡಿಗೆ ಯುದ್ಧ ಲಗ್ಗೆಯನ್ನು ಇಟ್ಟಿತು. ಮನುಷ್ಯನಲ್ಲಿ ನಾನು ನನ್ನದು ಎನ್ನುವ ಸ್ವಾರ್ಥ ಹೆಚ್ಚಾಗಿ ಯುದ್ಧದ ಪರಿಕಲ್ಪನೆಗಳು ಬಂದದ್ದು. ಹಾಗೆ ವರ್ಗ, ವರ್ಣದ ತಾರತಮ್ಯ, ಜಾತಿ, ಧರ್ಮಗಳ ಸಮನ್ವಯತೆ ಇಲ್ಲದೇ ಬದುಕಿನ ಸಂಕೇತವಾಗಿರುವ ಭೂಮಿ ನೆತ್ತರಿನ, ಹಿಂಸೆಯ ಮಡುವಾಗುತ್ತಿದೆ. ಆ ಹಿಂಸೆಯ ಮಡುವಿನಲ್ಲಿ ಶಾಂತಿ ಮರೆಯಾಗುತ್ತಿದೆ ಎನ್ನುವಲ್ಲಿ ಬುದ್ಧನ ತಾತ್ವಿಕ ಸಿದ್ಧಾಂತ ಹೇಗೆ ಅಪಮೌಲೀಕರಣಕ್ಕೆ ಒಳಗಾಗುತ್ತಿರುವ ಬಗೆಯನ್ನು ವಾಸ್ತವದ ನೆಲೆಗಟ್ಟಿನ ಸೂಕ್ಷ್ಮನೋಟವನ್ನು ಬರಗೂರರು ತಮ್ಮ ಸಿನಿಮಾದಲ್ಲಿ ಅಭಿವ್ಯಕ್ತಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಪುರುಷ ಪಾತ್ರಗಳ ಮೂಲಕವೇ ಜಗತ್ತನ್ನು ನೋಡುವ ಸಿದ್ಧ ಮಾದರಿಯ ಬದಲಾಗಿ ಮನುಷ್ಯ ಸಮಾಜದ ಸಮಾನ ಜೀವಿಯಾದ ಹೆಣ್ಣಿನ ಮೂಲಕವೂ ಈ ಜಗತ್ತನ್ನು ಮತ್ತು ಜಗತ್ತಿನ ಚಿಂತನಾಧಾರೆಗಳನ್ನು ಅಭಿವ್ಯಕ್ತಿಸಲು ಸಾಧ್ಯವೆಂಬುದನ್ನು ಸಿನೆಮಾ ಮೂಲಕ ತೋರಿದ್ದಾರೆ. ಈ ಬಗೆಯ ಗುಣಾತ್ಮಕ ಅಂಶಗಳೇ ಸಿನಿಮಾದ ಜೀವಾಳವಾಗಿದೆ. ಏಕಪಾತ್ರವನ್ನು ಮಾಡುವಾಗ ವ್ಯಕಿಯ ಅಭಿನಯ ಏಕತಾನತೆ ಕಡೆಗೆ ವಾಲುವ, ಸಪ್ಪೆಯಾಗಿ ಬಿಡುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಈ ಬಗೆಯ ಅವಕಾಶಗಳಿಂದ ನಟ/ನಟಿಯ ನಟನೆ ಮಿತಿಗೆ ಒಳಪಡುವುದುಂಟು. ಈ ಬಗೆಯ ಮಿತಿಗಳನ್ನು ಬಹಳ ನಾಜೂಕಿನಿಂದ ಕಥಾಹಂದರ ವಿಸ್ತಾರಗೊಳ್ಳುತ್ತಾ ಹೋಗುತ್ತದೆ.

ಅಲ್ಲದೇ ಬರಗೂರರ ಚಿಂತನೆಗಳಲ್ಲಿ ಸ್ತ್ರಿ ಸಂವೇದನೆಯನ್ನು ಪ್ರಖರವಾಗಿ ಅಭಿವ್ಯಕ್ತಿಗೊಂಡಿವೆ. ಹೆಣ್ಣಿನ ಒಂಟಿ ಬದುಕಿನ ಹೋರಾಟ, ಸಮಾಜ ಆಕೆಯನ್ನು ನಡೆಸಿಕೊಳ್ಳುವ ಕ್ರಮ, ಯಜಮಾನ್ಯದ ಕ್ರೌರ್ಯದ ಮಧ್ಯೆ, ಭಯದ ಗೂಡಿನಲ್ಲೂ ಧೈರ್ಯದ ಬೀಜವನ್ನು ಬರಗೂರರು ತಮ್ಮ ಕಥಾ ಹಂದರದಲ್ಲಿ ಬಿತ್ತುತ್ತಾರೆ. ಶಾಂತಿ ಸಿನೆಮಾದಲ್ಲಿ ಏಕ ವ್ಯಕ್ತಿ ಹೆಣ್ಣಿನ ಪಾತ್ರ ರೂಪಕವನ್ನು ಸೃಷ್ಟಿಸುವ ಮೂಲಕ ಮಹಿಳಾ ಸಂವೇದನೆಯನ್ನು ಎತ್ತಿಹಿಡಿಯುತ್ತಾ ಮಹಿಳಾ ಸಶಕ್ತಿಯ ಸಕಾರಾತ್ಮಕ ಆಲೋಚನೆ ಕಡೆಗೆ ಪ್ರೇಕ್ಷರನ್ನು ಕರೆದೊಯ್ಯುತ್ತಾರೆ. ಇದು ಸಮಾನತೆಯ ಪರಿಕಲ್ಪನೆಯ ಪಾಠವೂ ಹೌದು. ಆದ್ದರಿಂದ ಬರಗೂರರ ಸಿನಿಮಾಗಳಲ್ಲಿ ಸಿನಿಕತನಕ್ಕಿಂತ ಆಶಾವಾದದೆಡೆ ಸಮಾಜದ ಆಲೋಚನೆಯನ್ನು ಚಿಂತನೆಗೆ ಒಡ್ಡುತ್ತಾರೆ. ಹೆಣ್ಣೆಂದರೆ ಮುಗಿಲೆತ್ತರದ ಕನಸು ಎನ್ನುವಲ್ಲಿ ಸ್ತ್ರಿಪರವಾಗಿ ನಿಲ್ಲುವ ಆಲೋಚನಾ ಕ್ರಮ ಇಂದಿನ ಅಗತ್ಯವು ಹೌದು. ಯಾವ ಸಮಾಜ ಹೆಣ್ಣನ್ನು ಎರಡನೆ ದರ್ಜೆ ಪ್ರಜೆಯನ್ನಾಗಿ ನೋಡುತ್ತದೆಯೋ ಅದೇ ಸಮಾಜದಲ್ಲಿ ಹೆಣ್ಣಿನ ಮೂಲಕವಾಗಿಯೇ ಬದಲಾವಣೆಯ ಸಿದ್ಧಾಂತವನ್ನು ಸಾರುವುದು, ಶಾಂತಿ ಪ್ರತಿಪಾದನೆ ಮಾಡುವುದು; ಚಲಿಸುವ ನದಿಯಲ್ಲಿ ಪ್ರವಾಹದ ವಿರುದ್ಧದ ಈಜಾಟದ ಸಂಕಟಗಳು ಸಂಕಷ್ಟಗಳು ಎದುರಾಗುತ್ತವೆ. ಹೆಣ್ಣು ಸಮಾಜದ ಮನುಷ್ಯ ಜೀವಿ ಎನ್ನುವ ನಿರ್ದೇಶಕರ ಜೀವಪರ ನಿಲುವುಗಳು ಪ್ರಸ್ತುತದ ಅಗತ್ಯವೂ ಹೌದು.

ಸ್ವಾತಂತ್ರ್ಯವಿರದೇ ಶಾಂತಿ ಇರಲು ಹೇಗೆ ಸಾಧ್ಯ ಎನ್ನುವು ಬಹು ಮುಖ್ಯಪ್ರಶ್ನೆಯನ್ನು ಎತ್ತುವ ಮೂಲಕ 'ಸ್ವಾತಂತ್ರ್ಯ' ಪರಿಭಾಷೆಗೆ ಹೊಸ ಅರ್ಥಕೊಟ್ಟಿದ್ದಾರೆ. ಪಾರಿವಾಳದ ಸಂಕೇತವನ್ನಾಗಿಸಿಕೊಂಡು ಪಂಜರಲ್ಲಿ ಕೂಡಿ ಹಾಕುವ ಮೂಲಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಮನೋಭಾವಕ್ಕಿಂತ ಸ್ವತಂತ್ರವಾಗಿಸಿ ಪ್ರೀತಿಯಿಂದ ಸನಿಹಕ್ಕೆ ಬರುವಂತಹ ಅವಕಾಶಗಳ ಸಾಧ್ಯತೆಗಳನ್ನು ಕಟ್ಟಿಕೊಡುತ್ತಾರೆ.

ಗಾಂಧಿಯ ಅಹಿಂಸೆ ತತ್ವವನ್ನು ಪ್ರತಿಪಾದಿಸುವ ಎಳೆಯನ್ನು ಪಾರಿವಾಳದ ಮುಂದೆ ನಾಯಕಿ ಹೇಳುತ್ತಾ ಹೋಗುವ ಅಂಶಗಳು ತುಂಬಾ ಮುಖ್ಯವೆನಿಸುತ್ತವೆ. ಚರಕವನ್ನು ಜ್ಯಾತ್ಯಾತೀತತೆಗೆ ಹೋಲಿಸುವ ಮೂಲಕ ಅಲ್ಲಿ ಬರುವ ಪಾರಿವಾಳದ ರೂಪಕದ ಮೂಲಕ ಶಾಂತಿ ಪ್ರತಿಪಾದನೆಯ ತತ್ವವನ್ನು ಹೇಳುತ್ತಾ, ಮತ್ತು ಕೋಭೆಗೆ ಒಳಗಾಗುವುದು, ಆ ಕ್ಷೋಭೆಯಿಂದ ಹೊರಬರಲು ಇರುವ ಹೊಯ್ದಾಟಗಳು, ಒದ್ದಾಟಗಳನ್ನು ಸೂಕ್ಷ್ಮವಾಗಿ ಚಿತ್ರದಲ್ಲಿ ಸೆರೆಹಿಡಿದಿಡಲಾಗಿದೆ.

ಶಾಂತಿಯ ಸಂಕೇತವಾದ ಪಾರಿವಾಳ ಮತ್ತು ಯುದ್ಧದ ಸಂಕೇತವಾದ ಪಿಸ್ತೂಲುಗಳು ಸಿನಿಮಾದಲ್ಲಿ ಮೌನದಲ್ಲೇ ಬಹಳಷ್ಟು ಅರ್ಥವಿನ್ಯಾಸವನ್ನು ಹೆಣೆಯುವ ಮೂಲಕ ಶಾಂತಿ ಮತ್ತು ಸಮರ ಬದುಕಿನ ಅರ್ಥಸಾಧ್ಯತೆಗಳನ್ನು ಕಟ್ಟಿಕೊಡುತ್ತವೆ. ಶಾಂತಿ ಮತ್ತು ಸಮರ ವಿರುದ್ಧ ದಿಕ್ಕಿನಲ್ಲಿದ್ದರೆ ಅದರ ಪರಿಣಾಮಗಳು ಭೀಕರವಾಗಿರುತ್ತವೆ. ಆದರೆ ಶಾಂತಿ ಸಮರ ಜೊತೆಗೂಡಿ ನಡೆದರೆ ಬದುಕಿಗೆ ಹೊಸನೋಟ ಸಿಗುವುದೆಂಬ ಭಾವಗಳು ಅಭಿವ್ಯಕ್ತಗೊಳ್ಳುತ್ತದೆ. ಶಾಂತಿಯನ್ನು ಬಯಸುವ ಮನಸ್ಸು ಬಿಡುಗಡೆಗೆ ಬಯಸುತ್ತಲೇ ಇರುತ್ತದೆ.

ಮನುಷ್ಯರ ಮನೋಭೂಮಿಕೆ ಮತ್ತು ಅನುಭವ ರೂಪಿಕೆಗಳಿಗೆ ಕಾರಣವಾಗುವ ಸಾಮಾಜಿಕ, ರಾಜಕೀಯ, ಕೋಮುಗಲಭೆ ಹಾಗೂ ಸೌಹಾರ್ದದ ಪ್ರತಿಪಾದನೆಯ ಹಲವು ಆಯಾಮಗಳು ತೆರೆದುಕೊಳ್ಳುತ್ತವೆ. ವಾಸ್ತವಕ್ಕೆ ಮುಖಾಮುಖಿಯಾಗಿಸುವ ಪ್ರಯತ್ನವನ್ನು ಕಾಣುತ್ತೇವೆ.

ಶಾಂತಿ ಪ್ರತಿಪಾದನೆಯಲ್ಲಿ ಅಪಾಯಗಳು ಇಲ್ಲದಿಲ್ಲ. ಯುದ್ಧದಲ್ಲಿ ಗೆದ್ದಾಗ ನಷ್ಟದ ಪರಿಣಾಮಕ್ಕಿಂತ ಗೆದ್ದ ವೈಭವ ವಿಜೃಂಭಿಸಿದರೆ, ಸೋತಾಗ ಮತ್ತೆ ಸೋಲಿನ ಹಿಂದಿನ ವೈಷಮ್ಯದ ಬುಗ್ಗೆ ಉಕ್ಕುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಈ ಬಗೆಯ ಸೂಕ್ಷ್ಮಗಳು ಅಗತ್ಯವಾಗಿ ಬೇಕು. ಈ ಹಿನ್ನಲೆಯಲ್ಲಿ 'ಶಾಂತಿ'ಯು ಅಶಾಂತಿಯೊಂದಿಗಿನ ಪಿಸುಮಾತನ್ನು ನಿರ್ದೇಶಕರು ಅಚ್ಚುಕಟ್ಟಾಗಿ ಕಟ್ಟುವ ಮೂಲಕ ವಾಸ್ತವದ ನೆಲೆಗಟ್ಟಿನಲ್ಲಿ 'ಶಾಂತಿ' ಪ್ರತಿಪಾದನೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಹಾಗೆ ಯಾವಾಗ ಶಾಂತಿ ಗಲಭೆ, ಕ್ಷೋಬೆ ಉಂಟಾಗುತ್ತದೆಯೋ ಆಗೆಲ್ಲಾ 'ಶಾಂತಿ' ಪ್ರಸ್ತುತವಾಗುತ್ತಲೇ ಇರುತ್ತದೆ.

ಪೂರಕ ಆಕರಗಳು


೧. ಬರಗೂರರು ನಿರ್ದೇಶಿಸಿದ 'ಶಾಂತಿ' ಕನ್ನಡ ಚಲನಚಿತ್ರ.
೨. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಲೇ: ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ವರ್ಷ:೧೯೯೩
೩. ಸ್ತ್ರೀ ಮತ್ತು ರಾಜಕಾರಣ, ಲೇ: ಕೇಶವ ಶರ್ಮ ಕೆ., ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವರ್ಷ: ೨೦೦೦
೪. ಬರಗೂರರ ಸಾಹಿತ್ಯ ಸಮೀಕ್ಷೆ, ಲೇ: ಕೃಷ್ಣ ನಾಯಕ, ಸಾಮಾಜಿಕ ನ್ಯಾ ಸಂಸ್ಕೃತಿ ಪ್ರಕಾಶನ , ವೈ.ಎನ್. ಹೊಸಕೋಟೆ ತುಮಕೂರು. ವರ್ಷ:೨೦೧೦